## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೃಷ್ಣಾ ಮೇಲ್ದಂಡೆ ಯೋಜನೆಯ ಇಂಡಿ ಏತ ನೀರಾವರಿ ಯೋಜನೆ ಹಂತ – 1 ಮತ್ತು 2ರಡಿ ಯೋಜಿತ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಒದಗಿಸಲು ಯೋಜನೆಯ ಮುಖ್ಯ ಸ್ಥಾವರದಲ್ಲಿರುವ 8 ಪಂಪು ಮತ್ತು ಮೋಟಾರುಗಳನ್ನು ದುರಸ್ತಿಗೊಳಿಸಿ 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿಡುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓಸಲಾಗಿದೆ:** ವ್ಯವಸ್ಥಾಪಕ ನಿರ್ದೇಶಕರು , ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರ ಪತ್ರ ಸಂಖ್ಯೆ: ವ್ಯ.ನಿ/ತಾಂತ್ರಿಕ-2/19/2/2022-23/576, ದಿನಾಂಕ:17.05.2022

***

**ಪ್ರಸ್ತಾವನೆ:**

ಮೇಲೆ ಓದಲಾದ(1)ರ ಪತ್ರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಇಂಡಿ ಏತ ನೀರಾವರಿ ಯೋಜನೆಯು ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳಡಿಯ ಒಟ್ಟು 62,582 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಯಾಗಿರುತ್ತದೆ; ಕೃ.ಮೇ.ಯೋ. ಹಂತ-2ರಡಿ ಇಂಡಿ ಏತ ನೀರಾವರಿ ಕಿ.ಮೀ. 0.00 ರಿಂದ 97.30 ರ ವರೆಗಿನ ಕಾಲುವೆ ಜಾಲದ ಕಾಮಗಾರಿ ಪೂರ್ಣಗೊಂಡಿದ್ದು, ಅಧಿಸೂಚಿತ ಅಚ್ಚುಕಟ್ಟು ಪ್ರದೇಶ ಸುಮಾರು 41,900 ಹೆಕ್ಟೇರ್ ಪ್ರದೇಶಕ್ಕೆ ಈಗಾಗಲೇ ನೀರಾವರಿ ಸೌಲಭ್ಯವನ್ನು ಒದಗಿಸುತ್ತಿರುವ ಯೋಜನೆಯ ಮುಖ್ಯ ಸ್ಥಾವರದಲ್ಲಿ 2815 HP ಸಾಮರ್ಥ್ಯದ (5+1) ಪಂಪಿಂಗ್ ಮಷಿನರಿಗಳನ್ನು ಅಳವಡಿಸಲಾಗಿರುತ್ತದೆ ಎಂದು ಮತ್ತು ಕೃ.ಮೇ.ಯೋ. ಹಂತ-3ರಲ್ಲಿ ಇಂಡಿ ಏತ ನೀರಾವರಿ ವಿಸ್ತರಣೆ ಕಿ.ಮೀ. 97.30 ರಿಂದ 147.30 ವರೆಗಿನ ಕಾಲುವೆ ಜಾಲದಡಿ 20,682 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿದ್ದು, ಇದಕ್ಕಾಗಿ ಯೋಜನೆಯ ಮುಖ್ಯ ಸ್ಥಾವರದಲ್ಲಿ ಹೆಚ್ಚುವರಿ 2 ಪಂಪು ಮತ್ತು ಮೋಟಾರ್‌ಗಳನ್ನು 2013 ನೇ ಸಾಲಿನಲ್ಲಿ ಅಳವಡಿಸಲಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

ಪ್ರಸ್ತುತ, ಇಂಡಿ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದಲ್ಲಿ ಅಳವಡಿಸಲಾದ 8 ಪಂಪು ಮತ್ತು ಮೋಟಾರ್‌ಗಳು ಕಾರಣಾಂತರಗಳಿಂದ ಸವಕಳಿಯಿಂದಾಗಿ ನೀರೆತ್ತುವ ಸಾಮರ್ಥ್ಯ ಕಡಿಮೆಯಾಗಿ ದುರಸ್ತಿಗೆ ಬಂದಿದ್ದು, ನಿಷ್ಕ್ರಿಯಗೊಂಡಿರುವ ಪ್ರಯುಕ್ತ ಕಾಲುವೆ ಜಾಲದಡಿ ಯೋಜಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದರಲ್ಲಿ ಅಡಚಣೆ/ತೊಂದರೆ ಉಂಟಾಗುತ್ತಿದ್ದು, ಸದರಿ ಪಂಪು ಮತ್ತು ಮೋಟರ್‌ಗಳ ವಸ್ತು ಸ್ಥಿತಿ ಕುರಿತು ತಾಂತ್ರಿಕ ತಜ್ಞರಿಂದ ಪರಿವೀಕ್ಷಣೆಗೆ ಒಳಪಡಿಸಿ ವರದಿ ಪಡೆದಿದ್ದು, ಸದರಿ ವರದಿಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯದಂತೆ, ನಿಷ್ಕ್ರೀಯವಾದ ಪಂಪು ಮತ್ತು ಮೋಟಾರ್ ಗಳನ್ನು ಬದಲಿಸುವ ಅವಶ್ಯಕತೆ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

ಮೆ: ಜ್ಯೋತಿ ಲಿಮಿಟೆಡ್, ವಡೋದರಾ, ಇವರ ಮನವಿ ಪತ್ರ ದಿ:25.03.2022 ರಲ್ಲಿ ಇಂಡಿ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದಲ್ಲಿ ಅಳವಡಿಸಲಾದ ಎಲ್ಲಾ 8 ಪಂಪು ಮತ್ತು ಮೋಟಾರ್‌ಗಳ ಅವಶ್ಯಕ ಮೋಟರ್‌ಗಳ ತಪಾಸಣೆ ಕೈಗೊಂಡು ನಿಗಧಿತ ಅವಧಿಯೊಳಗೆ ದುರಸ್ತಿಗೊಳಿಸಲು ಹಾಗೂ ಸದರಿ ಪಂಪು ಮತ್ತು ಮೋಟರ್‌ಗಳ 5 ವರ್ಷದ ಪಾಲನೆ ಮತ್ತು ಪೋಷಣೆ ನಿರ್ವಹಿಸಲು ಒಪ್ಪಿ, ಸದರಿ ಸಂಸ್ಥೆಯವರು ಸ್ವ ಇಚ್ಛೆಯಿಂದ ಒಪ್ಪಿದ ಮೊತ್ತ ರೂ.7.75 ಕೋಟಿ ಮೊತ್ತಕ್ಕೆ (ಜಿ.ಎಸ್.ಟಿ ಹೊರತುಪಡಿಸಿ) ಪ್ರಸ್ತಾವನೆ ಸಲ್ಲಿಸಿರುವುದಾಗಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

.............1/-

ಪ್ರಸ್ತಾವನೆ ಕುರಿತಂತೆ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು (a) ಇಂಡಿ ಏತ ನೀರಾವರಿ ಯೋಜನೆ ಹಂತ-1&2ರಡಿ ಅಧಿಸೂಚನೆಗೊಂಡಿರುವ ಅಚ್ಚುಕಟ್ಟು ಕ್ಷೇತ್ರ ಸುಮಾರು 62,582 ಹೆಕ್ಟೇರ್ ಪ್ರದೇಶಕ್ಕೆ ಪ್ರಸಕ್ತ ಸಾಲಿನಲ್ಲಿ ನೀರು ಒದಗಿಸುವ ಸಲುವಾಗಿ ಸದರಿ ಯೋಜನೆಯಡಿ ಬರುವ ಪಂಪು ಮತ್ತು ಮೋಟಾರ್‌ಗಳನ್ನು ಅಳವಡಿಸಲು/ಸುಸ್ಥಿತಿಯಲ್ಲಿಡಲು ಮೆ: ಜ್ಯೋತಿ ಲಿಮಿಟೆಡ್, ವಡೋದರಾ ಇವರಿಗೆ ರೂ.7.75 ಕೋಟಿ (ಜಿ.ಎಸ್.ಟಿ ಹೊರತುಪಡಿಸಿ) ಮೊತ್ತಕ್ಕೆ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999, 4(ಜಿ)ರಡಿ ವಿನಾಯಿತಿ ನೀಡಿ, ಸದರಿ ಗುತ್ತಿಗೆದಾರರಿಗೆ ಗುತ್ತಿಗೆ ವಹಿಸಲು ಹಾಗೂ (b) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 194 ಕೆಬಿಎನ್ 2022, ಬೆಂಗಳೂರು, ದಿನಾಂಕ: 06.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೃಷ್ಣಾ ಮೇಲ್ದಂಡೆ ಯೋಜನೆಯ ಇಂಡಿ ಏತ ನೀರಾವರಿ ಯೋಜನೆ ಹಂತ-1&2 ರಡಿ ಅಧಿಸೂಚನೆಗೊಂಡಿರುವ ಅಚ್ಚುಕಟ್ಟು ಪ್ರದೇಶಕ್ಕೆ ಪ್ರಸಕ್ತ 2022ನೇ ಸಾಲಿನಲ್ಲಿ ನೀರು ಒದಗಿಸುವ ಸಲುವಾಗಿ ಸದರಿ ಯೋಜನೆಯ ಮುಖ್ಯ ಸ್ಥಾವರದಲ್ಲಿ ಅಳವಡಿಸಿರುವ ಒಟ್ಟು 8 ಪಂಪು ಮತ್ತು ಮೋಟಾರ್‌ಗಳನ್ನು ದುರಸ್ತಿಗೊಳಿಸಿ ಸುಸ್ಥಿತಿಯಲ್ಲಿಡುವ ರೂ.7.75 ಕೋಟಿ (ಜಿ.ಎಸ್.ಟಿ ಹೊರತುಪಡಿಸಿ) ಮೊತ್ತದ ಕಾಮಗಾರಿಗೆ ನಿಗಮದ ನಿರ್ದೇಶಕರ ಮಂಡಳಿಯ ಘಟನೋತ್ತರ ಮಂಜೂರಾತಿ ಪಡೆಯುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್ ಪಿ 2022, ದಿನಾಂಕ:04/04/2022ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/6/2022
**(ರವೀಂದ್ರ ಕೊಂಡ)**
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5),
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು (ಎ&ಇ) / (ಇ&ಆರ್.ಎಸ್.ಎ)/(ಜಿ.&ಎಸ್.ಎಸ್.ಎ)ಕರ್ನಾಟಕ ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜ.ಸಂ.ಇಲಾಖೆ
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ
7. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯಜಲ ನಿಗಮ ನಿಯಮಿತ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಕೃಭಾಜನಿ, ಕಾಲುವೆ ವಲಯ -2 ರಾಂಪುರ.
9. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ), ಜಲ ಸಂಪನ್ಮೂಲ -ಇಲಾಖೆ.
11. ತಾಂತ್ರಿಕ ಸಹಾಯಕರು-6, ಜಲ ಸಂಪನ್ಮೂಲ ಇಲಾಖೆ.
12. ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ.